## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ , ಶ್ರೀರಂಗಪಟ್ಟಣ

## ಸಿ.ಸಿ. 344/2013

| | |
|---|---|
| ಸಿ.ಡಬ್ಲ್ಯೂ : | 6 |
| ಪಿ.ಡಬ್ಲ್ಯೂ : | 10 |

| | | |
|---|---|---|
| ಸಾಕ್ಷಿದಾರರ ಹೆಸರು | : | ಕಬ್ಬಾಳು |
| ತಂದೆ/ ಪತಿಯ ಹೆಸರು | : | ಮುದ್ದಯ್ಯ |
| ವಯಸ್ಸು | : | 29 ವರ್ಷ |
| ವೃತ್ತಿ | : | ಡ್ರೈವರ್ ಕೆಲಸ |
| ವಾಸ | : | ಗಾಮನಹಳ್ಳಿ |

## ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 16.12.2025

## ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ನನಗೆ ಆರೋಪಿತರ ಪರಿಚಯ ಇರುತ್ತದೆ. ಆರೋಪಿತರು ನಮ್ಮ ಊರಿನವರು ಇರುತ್ತಾರೆ. ನನಗೆ ಚಾಸಾ.1 ರಿಂದ 3 ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನಗೆ ಈ ಘಟನೆ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು)

<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>

ದಿಃ 15.08.2013 ರಂದು ಸಂಜೆಯ ಸಮಯದಲ್ಲಿ ಮನೆಯಲ್ಲಿ ಇರುವಾಗ 1 ನೇ ಆರೋಪಿಯ ಟೀ ಅಂಗಡಿಯಲ್ಲಿ ಪೊಲೀಸರು ಬಂದು ರೈಡ್ ಮಾಡಿದ್ದು, ಆ ಸಂದರ್ಬದಲ್ಲಿ ಗಲಾಟೆ ನಡೆಯುತ್ತಿದೆ ಎಯಿ ನನಗೆ ಮಾಹಿತಿ ಬಂದಿದ್ದು ಆಗ ನಾನು ಅಲ್ಲಿಗೆ ಹೋಗಿ ನೋಡಲಾಗಿ ಆರೋಪಿತರೆಲ್ಲರೂ ಪೊಲೀಸ್ ಜೀಪ್ ಸುತ್ತಾ ನಿಂತಿದ್ದು ಅವರನ್ನು ಉದ್ದೇಶಿಸಿ ಅವ್ಯಾಚ ಶಬ್ದಗಳಿಗಂದ ಬೈಯುತ್ತಿದಾಗ ಸಂತೋಷ್, ಶಿವಶಂಕರ್ ಮತ್ತು ಶಿವಯ್ಯ ಎಂಬುವರು ಸಮಾಧಾನ ಮಾಡಿದ್ದು, ಆಗ ಪೊಲೀಸರು ಜೀಪಿನಲ್ಲಿ ಹೊರಟು ಹೋಗಿರುತ್ತಾರೆ. ನಂತರ ನನಗೆ ವಿಚಾರ ತಿಳಿಸಿದ್ದೇನೆಂದರೆ , ಆರೋಪಿತರು ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪಡಿಸಿ ಅವರುಗಳನ್ನು ಎಳೆದಾಡಿ ಕೈಗಳಿಂದ ಹೊಡೆದು ಕೆಳಗೆ ಬೀಳಿಸಿ ಕಾಲಿನಿಂದ ಒದ್ದು ಅವರ ಯೂನಿಫಾರಂ ಬಟ್ಟೆಯನ್ನು ಹರಿದು ಹಾಕಿ ಕೊಲೆ ಬೆದಕಿರಿಕೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಈ ಘಟನೆಯ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆ ನೀಡಿಲ್ಲ ಎಂದು ತಿಳಿಸಿದ್ದರಿಂದ ಸಾಕ್ಷಿಯ ಹೇಳಿಕೆಯನ್ನು ಅಭಿಯೋಜನೆಯ ಪರವಾಗಿ ನಿಪಿ.9 ಎಂದು , ಅದರಲ್ಲಿರುವ ಆಯ್ದ ಭಾಗವನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ</u>

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲಎಂದು ತಿಳಿಸಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.